ಸಾಕ್ಷಿಯನ್ನು ದಿ: 20.07.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**<u>ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ ಃ-</u>**

1. ನಾನು ಮೂಲತಃ ಕನಕಪುರ ತಾಲ್ಲೂಕು ಕಂಚಕಾರನಹಳ್ಳಿ ಗ್ರಾಮದವನು. ನಾನು ಲಿಂಗಣಾಪುರ ಗ್ರಾಮದಲ್ಲಿ ಸುಮಾರು 20 ವರ್ಷಗಳಿಂದ ವಾಸವಿದ್ದೇನೆ. ದಾವ ಸ್ವತ್ತನ್ನು ಖರೀದಿ ಮಾಡಿದ ನಂತರ ಲಿಂಗಣಾಪುರ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆಃ ಹಳ್ಳ, ಪಶ್ಚಿಮ ಮತ್ತು ಉತ್ತರಕ್ಕೆಃ ಪುಟ್ಟಮಾದಶೆಟ್ಟಿ ಜಮೀನು, ದಕ್ಷಿಣಕ್ಕೆಃ ಸವಡೆ ಮರಿಯಪ್ಪನ ಜಮೀನು. ಪುಟ್ಟಮಾದಶೆಟ್ಟಿಗೆ ಎಷ್ಟು ಜಮೀನಿದೆ ಗೊತ್ತಿಲ್ಲ. ಸವಡೆ ಮರಿಯಪ್ಪನಿಗೆ ಎಷ್ಟು ಜಮೀನಿದೆ ಮತ್ತು ಅದರ ಸರ್ವೆ ನಂಬರ್ ಗೊತ್ತಿಲ್ಲ. ನನಗೆ ಪುಟ್ಟಮಾದಶೆಟ್ಟಿ ಮತ್ತು ಸವಡೆ ಮರಿಸ್ವಾಮಿ ಗೊತ್ತು. ಪ್ರತಿವಾದಿಗೆ ನನ್ನ ಜಮೀನಿನ ಪಕ್ಕದಲ್ಲಿ ಜಮೀನಿದೆ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ನೀಡಿದ ದೂರಿನಲ್ಲಿ ಪ್ರತಿವಾದಿಯು ನಮ್ಮ ಪಕ್ಕದ ಜಮೀನಿನವನು ಎಂದು ಹೇಳಿರುತ್ತೇನೆಂದರೆ ಸರಿ. ಪ್ರತಿವಾದಿಗೆ ಲಿಂಗಣಾಪುರ ಗ್ರಾಮದ ಸರ್ವೆ ನಂ.170/4 ಮತ್ತು 175/5 ರಲ್ಲಿ ಖುಷ್ಕಿ ಜಮೀನಿದೆ ಎಂದರೆ ಸರಿಯಲ್ಲ. ಪ್ರತಿವಾದಿ ತನ್ನ ಜಮೀನು ಸರ್ವೆ ನಂ.170/4 ಮತ್ತು 175/5 ಗೆ ನೀರು ತೆಗೆದುಕೊಂಡು ಹೋಗಲು ಸರ್ವೆ ನಂ.51/ಎ ರಲ್ಲಿ ಪೂ-ಪಃ 8 ಗಜ, ಉ-ದಃ5 ಗಜ ಮತ್ತು ಪೂ-ಪಃ 81 ಗಜ ಮತ್ತು ಉ-ದಃ 1 ಗಜ ಅಳತೆವುಳ್ಳ ಒಟ್ಟಾರೆ 1 ಗುಂಟೆ ಜಮೀನನ್ನು 1995 ರಲ್ಲಿ ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. ಪ್ರತಿವಾದಿ ಸರ್ವೆ ನಂ.51/ಎ ರಲ್ಲಿ ಜಮೀನು ಖರೀದಿ ಮಾಡಿದ್ದಾನೋ ಇಲ್ಲವೋ ಎಂದು ಸಾಕ್ಷಿ ಮಾಡಿಸಲು ತೊಂದರೆಯಿಲ್ಲ. 1995 ರಲ್ಲಿ ಪೈಪ್ ಲೈನ್ ಅಳವಡಿಸಿದ ಕಾರಣ ಅದನ್ನು ತೆಗೆದು ಹೊಸದಾಗಿ ಪೈಪ್ ಲೈನ್ ಅಳವಡಿಸಲು ಪ್ರತಿವಾದಿ ಮುಂದಾದಾಗ ನಾನು ಅದನ್ನು ತಡೆದಿರುತ್ತೇನೆಂದರೆ ಸರಿಯಲ್ಲ. ಪೈಪ್ ಲೈನನ್ನು ಹಾಕಬೇಕಾದರೆ 2 ಅಡಿಗಿಂತ ಆಳದಲ್ಲಿ ಪೈಪ್ ಅಳವಡಿಸಬೇಕೆಂದರೆ ಗೊತ್ತಿಲ್ಲ. ಈ ವಿಚಾರ ಗೊತ್ತಿದ್ದರೂ ಗೊತ್ತಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ಪೈಪ್ ಲೈನ್ ಅಳವಡಿಸಲು ತಹಸಿಲ್ದಾರರಿಂದ ಅನುಮತಿ ಪಡೆದರೂ ಸಹ ನಾನು ತೊಂದರೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ನಾನು ನನ್ನ ಜಮೀನನ್ನು ನೋಡಿದರೆ ಗುರುತಿಸುತ್ತೇನೆ. ಸರ್ವೆ ನಂ.51/ಎ ರಲ್ಲಿ ಪ್ರತಿವಾದಿ ಪೈಪ್ ಲೈನ್ ಅಳವಡಿಸಿದ್ದಾನೋ ಇಲ್ಲವೋ ಎಂದು ವರದಿ ಸಲ್ಲಿಸಲು

ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡಲು ನನಗೆ ತೊಂದರೆಯಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ಗುಂಟೆ ಪ್ರತಿವಾದಿ ಖರೀದಿ ಮಾಡಿಲ್ಲ ಎಂದು ನುಡಿಯುತ್ತಾರೆ. ನನಗೆ ಜಮೀನು ಮಾರಾಟ ಮಾಡುವಾಗ ಪ್ರತಿವಾದಿ ಆಸ್ತಿಯೂ ಸೇರಿದಂದತೆ ಚೆಕ್ಕುಬಂದಿ ನಮೂದು ಮಾಡಿ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ತೆಂಗಿನ ಮರ ಹೊರತು ಪಡಿಸಿ ಬೇರೆ ಯಾವುದೇ ಬೆಳೆ ಇರುವುದಿಲ್ಲ ಎಂದರೆ ಸರಿ ಸರಿಯಲ್ಲ. ಪ್ರತಿವಾದಿಗೆ ತೆಂದರೆ ಕೊಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯ ಒಂದು ಗುಂಟೆ ಜಮೀನನ್ನು ಲಪಟಾಯಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೋಲೀಸರು ಸಹ ಪ್ರತಿವಾದಿಗೆ ಪೈಪ್ ಲೈನ್ ಅಳವಡಿಕೊಂಡು ಹೋಗಲು ತೊಂದರೆ ಕೊಡಬೇಡ ಎಂದು ನನಗೆ ಬುದ್ದಿ ಹೇಳಿರುತ್ತಾರೆಂದರೆ ಸರಿಯಲ್ಲ. ನಾನೇ ಪ್ರತಿವಾದಿಯ 1 ಗುಂಟೆ ಆಸ್ತಿಗೆ ತೊಂದರೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿ ನನಗೆ ಯಾವುದೇ ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ನಷ್ಟವುಂಟು ಮಾಡಲು ನಾನೇ ತೊಂದರೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ